# ಕಥೆಯ ಮೂಲಕ ಗಣಿತ ಬೋಧನೆ

ಗಜೇಂದ್ರಕುಮಾರ್ ದೇವಾಂಗನ್



ಗೆಳೆಯರೆ, ಯಾರಿಗೆ ತಾನೆ ಕಥೆ ಕೇಳಲು ಇಷ್ಟವಿಲ್ಲ? ಯಾವುದೇ ಪರಿಕಲ್ಪನೆ ಅಥವಾ ಸಂದೇಶವನ್ನು ಕಥೆಯ ಮೂಲಕ ದಾಟಿಸುವುದು ಬಹು ಸುಲಭ. ಆದರೆ ಪರಿಕಲ್ಪನೆಗಳನ್ನು ಕಥಾ ಮಾಧ್ಯಮದ ಮೂಲಕ ದಾಟಿಸುವಾಗ ಕೆಲವು ಸಂಗತಿಗಳನ್ನು ಮನನಮಾಡುವುದು ಅಗತ್ಯವಾಗುತ್ತದೆ. ನೈಜ ಕಥೆ ಹೇಳುವಾಗ ಮಕ್ಕಳ ಹೆಸರು, ಕುಟುಂಬ, ಅವರ ಸಾಮಾಜಿಕ ಹಾಗೂ ಆರ್ಥಿಕ ಹಿನ್ನೆಲೆಗಳಿಗೆ ನೋವನ್ನುಂಟು ಮಾಡದಂತೆ, ಯಾವುದೇ ತಾರತಮ್ಯ ಭಾವನೆಗೆ ಎಡೆಯಿಲ್ಲದಂತೆ ನೋಡಿಕೊಳ್ಳಬೇಕಾಗುತ್ತದೆ. ನಾವೀಗ ಇಂತಹ ಒಂದು ಪ್ರಯತ್ನದ ಬಗ್ಗೆ ತಿಳಿದುಕೊಳ್ಳೋಣ.

ಕಳೆದ ಫೆಬ್ರವರಿಯಲ್ಲಿ ಐದನೇ ತರಗತಿಯ ಮಕ್ಕಳಿಗೆ ಸುತ್ತಳತೆಯ ಪರಿಕಲ್ಪನೆಯನ್ನು ಸ್ಪಷ್ಟಪಡಿಸಲು ಹೇಳಿದಕಥೆಯಿದು. ಮಕ್ಕಳ ಸುತ್ತಮುತ್ತಲಿನ ಪರಿಸರಕ್ಕೆ ಸಂಬಂಧಿಸಿದ್ದೇ ಕಥೆಯೊಂದನ್ನು ಅವರಿಗೆ ಹೇಳಲಾಯ್ತು. ಮಕ್ಕಳು ಕಥೆಯನ್ನು ಮೊದಲಿಂದ ಕೊನೆಯವರೆಗೂ ಆಸಕ್ತಿಯಿಂದ ಕೇಳಿಸಿಕೊಂಡರು. ಕಥೆಯಲ್ಲಿ ಅವರ ನೆರೆಹೊರೆಯ, ಹಳ್ಳಿಗಳ ಹಾಗೂ ಗ್ರಾಮೀಣ ಪರಿಸರದ ಹೆಸರುಗಳೇ ಇದ್ದವು. ಮಕ್ಕಳು ಸುತ್ತಳತೆಯ ಪರಿಕಲ್ಪನೆಯನ್ನು ಬಹುತೇಕ ಮೊದಲ ಪ್ರಯತ್ನದಲ್ಲೇ ಗ್ರಹಿಸಿದ್ದು ವಿಶೇಷವಾಗಿತ್ತು. ಇಚ್ಛಾಪುರ ಎಂಬ ಹಳ್ಳಿಯಿತ್ತು. ನಾನೀಗ ಹೇಳ ಹೊರಟಿರುವ ಕಥೆ ಕೆಲವು ವರ್ಷಗಳ ಹಿಂದೆ ಅಲ್ಲಿ ನಡೆದ ಘಟನೆಯನ್ನು ಕುರಿತದ್ದು. ಇಚ್ಛಾಪುರದಲ್ಲಿ ಒಂದು ದೊಡ್ಡದಾದ ತೆರೆದಬಯಲು ಪ್ರದೇಶವಿತ್ತು. ಹಳ್ಳಿಯ ಜನಸಂಖ್ಯೆ ಹೆಚ್ಚಾಗುತ್ತಿದ್ದಂತೆಯೇ ಈ ಬಯಲು ಪ್ರದೇಶವನ್ನು ಜನರು ಆಕ್ರಮಿಸಿಕೊಳ್ಳತೊಡಗಿದರು. ಅದರ ಬಹು ದೊಡ್ಡ ಭಾಗವನ್ನು ಅವರು ಬೇಸಾಯ ಮತ್ತು ಹಗೇವು (ಉಗ್ರಾಣ) ಮಾಡಲು ಬಳಸತೊಡಗಿದರು. ಇದನ್ನು ನೋಡಿದ ಕೆಲವು ಹಳ್ಳಿಗರು ಚಿಂತಾಕ್ರಾಂತರಾದರು. ಜನ ಈ ರೀತಿ ಅಕ್ರಮವಾಗಿ ನಮ್ಮ ಬಯಲು ಪ್ರದೇಶವನ್ನು ಒತ್ತುವರಿಮಾಡಿಕೊಂಡರೆ ಮಕ್ಕಳಿಗೆ ಆಡಲು ಯಾವುದೇ ಜಾಗ ಉಳಿಯುವುದಿಲ್ಲ ಎಂಬುದು ಅವರ ಚಿಂತೆಗೆ ಕಾರಣವಾಗಿತ್ತು. ಹೀಗಾಗಿ, ಅವರು ಆಟಕ್ಕಾಗಿ ಆ ಬಯಲಿನ ಒಂದು ಭಾಗವನ್ನು ತಮ್ಮ ಸುಪರ್ದಿಗೆ ಪಡೆಯಲು ಯೋಚಿಸಿದರು. ಅವರಲ್ಲಿ ಕೆಲವರಿಗೆ ಈ ವಿಚಾರ ಮೆಚ್ಚುಗೆಯಾಗಿ, ಮರುದಿನವೇ ಅದನ್ನು ಜಾರಿ ಮಾಡಲು ನಿರ್ಧರಿಸಿದರು.

ಇಡೀ ಹಳ್ಳಿಗೇ ಈ ವಿಚಾರ ತಿಳಿದು, ಅವರೆಲ್ಲರೂ ಒಮ್ಮತ ಸೂಚಿಸಿದರು. ಮರುದಿನ ಹಲವು ಹಳ್ಳಿಗರು ಇದಕ್ಕಾಗಿ ತಯಾರಿ ನಡೆಸಿ, ಮೈದಾನದ ಕಡೆ ಹೆಜ್ಜೆ ಹಾಕಿದರು. ಒಬ್ಬರು ಪಟ್ಟೆಗಳನ್ನು ಎಳೆಯಲು ಸುಣ್ಣವನ್ನು ಹೊತ್ತು ನಡೆದರೆ, ಮತ್ತೊಬ್ಬರ ಕೈಯಲ್ಲಿ ಗುದ್ದಲಿ, ಮಗದೊಬ್ಬರ ಕೈಯಲ್ಲಿ ಕುಡುಗೋಲು ಇತ್ತು. ಕುಡುಗೋಲು ಹಿಡಿದಾಕೆ ಅಲ್ಲಿ ಬೆಳೆದು ನಿಂತಿದ್ದ ಕಳೆ ಹುಲ್ಲನ್ನು ಕತ್ತರಿಸಲು ಸಜ್ಜಾಗಿ ಬಂದಿದ್ದಳು. ಮತ್ತೊಬ್ಬರ ಕೈಯಲ್ಲಿ ಹಗ್ಗವಿತ್ತು. ನಿಗದಿತ ಸ್ಥಳವನ್ನು ಅಗತ್ಯವಿರುವ ಸಲಕರಣೆಗಳೊಂದಿಗೆ ಎಲ್ಲರೂ ತಲಪಿದರು. ಹಳ್ಳಿಗರು ಆ ಮೈದಾನದ ಬಹು ದೊಡ್ಡ ಭಾಗವನ್ನೇ ಹಿಡಿದುಕೊಳ್ಳಲು ಸಜ್ಜಾದರು. ಅವರಲ್ಲಿ ಒಬ್ಬರು ಹಗ್ಗದ ಒಂದು ತುದಿಯನ್ನು, ಮತ್ತೊಬ್ಬರು ಅದರ ಇನ್ನೊಂದು ತುದಿಯನ್ನು ಹಿಡಿದು ಎಷ್ಟು ದೂರ ಸಾಧ್ಯವೋ ಅಷ್ಟು ದೂರ ನಡೆಯತೊಡಗಿದರು. ಅಳತೆ ಮಾಡಿದ ಜಾಗದ ಗುರುತು ಕಾಣುವಂತೆ ಅವರಲ್ಲಿ ಒಬ್ಬರು ಹಗ್ಗದ ಮೇಲೆ ಸುಣ್ಣ ಉದುರಿಸಿದರು. ಹೀಗೆ ಆಟದ ಮೈದಾನಕ್ಕೆ ಬೇಕಾದ ಸ್ಥಳವನ್ನು ಗುರುತುಮಾಡಲಾಯಿತು. ಎಲ್ಲರ ಮೊಗದ ಮೇಲೂ ಸಂತಸದ ನಗೆ ಸುಳಿದಾಡಿತು. ಅವರ ಮಕ್ಕಳಿಗೀಗ ಆಡಲು ವಿಶಾಲವಾದ, ಶಾಶ್ವತವಾದ ಸ್ಥಳವೊಂದು ದೊರೆತಂತಾಗಿತ್ತು.

ಮನೆಗೆ ಮರಳುವಾಗ ಹಳ್ಳಿಗರೆಲ್ಲರೂ ಆಟದ ಮೈದಾನದ ವಿಷಯವಾಗಿಯೇ ಚರ್ಚಿಸುತ್ತಾ ಬಂದರು. ಅಷ್ಟರಲ್ಲಿ, ಕೆಲವು ಹಳ್ಳಿಗರಿಗೆ ಈ ರೀತಿ ಗುರುತುಹಾಕಲಾದ ಭಾಗವನ್ನು ಹಾಗೆಯೇ ಬಿಟ್ಟರೆ ಕೆಲವೇ ದಿನಗಳಲ್ಲಿ ಸುಣ್ಣದ ಗುರುತು ಅಳಿಸಿಹೋಗಿ, ಬೇರಾರೋ ಬಂದು ಆ ಜಾಗವನ್ನು ಆಕ್ರಮಿಸಿಕೊಳ್ಳಬಹುದು ಎಂಬ ಚಿಂತೆ ಮನೆಮಾಡಿತು. ಹಾಗಾದಲ್ಲಿ, ಅವರ ಈ ಯೋಜನೆ ವ್ಯರ್ಥವಾದಂತೆಯೇ ಸರಿ. ಆದ್ದರಿಂದ, ಗುರುತು ಹಾಕಿರುವ ಭಾಗವನ್ನು ಆಟದ ಮೈದಾನಕ್ಕಾಗಿ ರಕ್ಷಿಸಬೇಕೆಂದೂ, ಅದಕ್ಕಾಗಿ ಹಣ ಮಂಜೂರು ಮಾಡಬೇಕೆಂದೂ ಜಿಲ್ಲಾಧಿಕಾರಿಗಳ ಬಳಿಗೆ ಮನವಿ ಕೊಂಡೊಯ್ಯುವ ಪ್ರಸ್ತಾವ ಕೇಳಿ ಬಂತು. ಎಲ್ಲರಿಗೂ ಸಮ್ಮತವಾಗಿ ಕಂಡು, ಮರುದಿನ ಜಿಲ್ಲಾಧಿಕಾರಿಗಳನ್ನು ಭೇಟಿಮಾಡಲು ನಿರ್ಧರಿಸಿದರು.

ಅವರ ಯೋಜನೆಯಂತೆ ಅವರೆಲ್ಲರೂ ಗುಂಪುಗೂಡಿ ಜಿಲ್ಲಾಧಿಕಾರಿಗಳ ಕಛೇರಿಗೆ ಒಟ್ಟಾಗಿ ತೆರಳಿದರು. ಸ್ವಲ್ಪ ಹೊತ್ತಿನಲ್ಲೇ ಆಗಮಿಸಿದ ಜಿಲ್ಲಾಧಿಕಾರಿಗಳು ಅವರು ಬಂದ ಕಾರಣವನ್ನು ಕೇಳಿದರು. ಜನ ತಮ್ಮ ಅಹವಾಲನ್ನು ಅವರ ಮುಂದಿಟ್ಟರು.

ಜಿಲ್ಲಾಧಿಕಾರಿಗಳು ಕೇಳಿದರು, "ಗುರುತು ಹಾಕಿರುವ ಮೈದಾನ ಎಷ್ಟು ದೊಡ್ಡದು?" .


ಜನ, "ಬಹು ದೊಡ್ಡದು" ಎಂದರು.

- "ಬಹಳ ದೊಡ್ಡದು ಎಂದರೆ ಏನರ್ಥ? ಈ ಕೋಣೆಯಷ್ಟು ದೊಡ್ಡದೆ?".
- "ಇಲ್ಲ ಸಾರ್, ಇದಕ್ಕಿಂತಲೂ ಬಹಳ ದೊಡ್ಡದು."
- "ಅಂದರೆ ಈ ಕಛೇರಿಯ ಕಟ್ಟಡದ ನಿವೇಶನದಷ್ಟು ದೊಡ್ಡದೆ?" ಎಂದು ಕೇಳಿದರು ಜಿಲ್ಲಾಧಿಕಾರಿಗಳು.
- "ಇಲ್ಲ ಸಾರ್. ಇದಕ್ಕಿಂತಲೂ ದೊಡ್ಡದು."
- "ಅಯ್ಯೋ, ಹಾಗಾದರೆ, ನೀವು ಸಫಲಪುರದವರೆಗೂ ಜಾಗವನ್ನು ಆಕ್ರಮಿಸಿಕೊಂಡಿದ್ದೀರಾ?"
- "ಇಲ್ಲ ಸಾರ್, ಅಷ್ಟೊಂದು ದೊಡ್ಡ ಜಾಗವಲ್ಲ."
- "ಹಾಗಾದರೆ, ನೀವೇಕೆ ನನಗೆ ಗುರುತುಹಾಕಿರುವ ಜಾಗದ ನಿಖರ ಅಳತೆಯನ್ನು ಹೇಳುತ್ತಿಲ್ಲ? ಅದರ ನಿಖರವಾದ ಉದ್ದ, ಅಗಲಗಳನ್ನು ನೀಡಿ."

ಜನಕ್ಕೆ ಮಾತು ಕಟ್ಟಿದಂತಾಯಿತು. ಅವರು ಗುರುತುಹಾಕಿದ ಆಟದ ಮೈದಾನದ ಉದ್ದ, ಅಗಲಗಳನ್ನು ಅಳೆದಿರಲಿಲ್ಲ. ಆದ್ದರಿಂದ ಅವರಿಗೆ ಜಿಲ್ಲಾಧಿಕಾರಿಗಳ ಪ್ರಶ್ನೆಗೆ ಉತ್ತರಿಸಲು ಆಗಲಿಲ್ಲ. ಮರಳಿ

ಹಳ್ಳಿಗೆ ಹೋಗುವುದೊಂದೇ ಅವರಿಗಿದ್ದ ಸದ್ಯದ ಆಯ್ಕೆಯಾಗಿತ್ತು. ಜಿಲ್ಲಾಧಿಕಾರಿಗಳು ಮತ್ತೊಮ್ಮೆ ಅವರಿಗೆ ಮೈದಾನದ ಅಳತೆಯನ್ನು ಸರಿಯಾಗಿ ತಿಳಿದುಕೊಂಡು ಬರುವಂತೆ ಸಲಹೆ ನೀಡಿದರು. ಮತ್ತೊಮ್ಮೆ ಹಳ್ಳಿಗರು ಅಗತ್ಯವಿರುವ ಸಲಕರಣೆಗಳೊಂದಿಗೆ ಮೈದಾನದ ಕಡೆ ಹೊರಟರು. ಅವರೊಡನೆ ಈಗ ಮೀಟರ್ ಗಳಲ್ಲಿ ಲೆಕ್ಕಹಾಕುವ ಅಳತೆ-ಟೇಪು, ಪೆನ್ನು ಹಾಗೂ ನೋಟ್ ಪುಸ್ತಕಗಳಿದ್ದವು. ಅವರು ಮಾಡಿದ್ದ ಗುರುತುಗಳು ನೇರವಾಗಿದ್ದವು. ಈ ನೆಲದ ಅಳತೆಯನ್ನು ಅವರು ಮಾಡುವುದಾದರೂ ಹೇಗೆ? ಪ್ರತಿಯೊಬ್ಬರೂ ತಮ್ಮದೇ ಆದ ಸಲಹೆಗಳನ್ನು ಮುಂದಿಟ್ಟರು. ಅವರಲ್ಲೊಬ್ಬರು, ಒಂದೊಂದೇ ರೇಖೆಗಳ ಉದ್ದಗಳನ್ನು ಅಳೆಯುವ ವಿಚಾರ ಮುಂದಿಟ್ಟರು. ನೆಲದ ಮೇಲೆ ಐದು ರೇಖೆಗಳಿದ್ದವು. ಅವರು ಅದನ್ನು ಅಳೆಯಬಹುದು, ಬಳಿಕ...

ಇದಕ್ಕೆ ಕೂಡಲೇ ದೊರೆತ ಪ್ರತಿಕ್ರಿಯೆಯೆಂದರೆ, “ಐದೂ ಅಳತೆಗಳನ್ನೂ ಕೂಡಿಬಿಡೋಣ” ಎಂಬುದಾಗಿತ್ತು. ಈ ರೀತಿ ಮಾಡಿದರೆ ಅದರ ಸುತ್ತ ಕಟ್ಟಬೇಕಾದ ಕಾಂಪೌಂಡ್ ಗೋಡೆಯು ಉದ್ದವೆಷ್ಟು ಇರಬೇಕು ಎಂದು ತಿಳಿಯುತ್ತದೆ. ಅವರೆಲ್ಲರೂ ಪ್ರಸ್ತಾವಿಸಿದ ವಿಧಾನವನ್ನು ಅರ್ಥಮಾಡಿಕೊಂಡು, ಅಳತೆಗೆ ಮುಂದಾದರು. ಒಂದು ರೇಖೆಯ ಉದ್ದ 38 ಮೀಟರ್ ಗಳಾಗಿತ್ತು.



ಅದರ ಮತ್ತೊಂದು ಬದಿಯ ಅಳತೆ 23 ಮೀಟರ್ ಗಳಾಗಿದ್ದರೆ, ಮುಂದಿನದು 27 ಮೀಟರ್, ಅದರ ಮುಂದಿನದು 44 ಮೀಟರ್ ಹಾಗೂ ಕೊನೆಯ ಬದಿಯ ಉದ್ದ 49 ಮೀಟರ್ ಗಳಾಗಿತ್ತು. **ತನೇಶ್** ಇದನ್ನು ತನ್ನ ನೋಟ್ ಪುಸ್ತಕದಲ್ಲಿ ಬರೆದುಕೊಳ್ಳುತ್ತಿದ್ದರೆ, **ವನಜ** ಅದನ್ನು ತನ್ನ ಮನಸ್ಸಿನಲ್ಲಿಯೇ ಕೂಡುತ್ತಿದ್ದಳು. ಅವರೆಲ್ಲರೂ ಎಲ್ಲ ರೇಖೆಗಳ ಉದ್ದಗಳನ್ನೂ ಅಳೆದು ಮುಗಿಯುತ್ತಿದ್ದಂತೆಯೇ ಉತ್ತರ ಸಜ್ಜಾಗಿತ್ತು. ಗೋಡೆಯ ಒಟ್ಟು ಉದ್ದ 181 ಮೀಟರ್ ಇರಬೇಕಾಗುತ್ತದೆ. ಈ ಕೆಲಸವನ್ನು ತೃಪ್ತಿಕರವಾಗಿ ಮುಗಿಸಿದ ಧನ್ಯತೆಯ ಭಾವನೆ ಎಲ್ಲರ ಮೊಗದ ಮೇಲೂ ಕಾಣುತ್ತಿತ್ತು. ನಿಜಕ್ಕೂ, ಹಳ್ಳಿಗರಿಗೆ ಇದೊಂದು ಸಾಧನೆಯೇ ಆಗಿತ್ತು.

ಮರುದಿನ ಅವರೆಲ್ಲರೂ ಮತ್ತೊಮ್ಮೆ ಜಿಲ್ಲಾಧಿಕಾರಿಗಳನ್ನು ಭೇಟಿಯಾದರು. ಈ ಬಾರಿ ಅವರು ಸಂತಸದಿಂದ ಅಳತೆಗಳೊಂದಿಗೆ ಮತ್ತೊಮ್ಮೆ ತಮ್ಮ ಅಹವಾಲನ್ನು ಸಲ್ಲಿಸಿದರು.

ಜಿಲ್ಲಾಧಿಕಾರಿಗಳು, “ಈ ಜಾಗಕ್ಕೆ ಮುಳ್ಳಿನ ಬೇಲಿ ಹಾಕಿದರೆ ಸಾಕೋ, ಅಥವಾ, ಸಿಮೆಂಟ್ ಗೋಡೆಯೇ ಆಗಬೇಕೋ?” ಎಂದು ಕೇಳಿದರು.

ಹಳ್ಳಿಗರೆಲ್ಲರೂ ಒಕ್ಕೊರಲಲ್ಲಿ “ಸಿಮೆಂಟ್ ಗೋಡೆಯೇ” ಆಗಬೇಕೆಂದು ಗಟ್ಟಿಯಾಗಿ ಹೇಳಿದರು.

ಜಿಲ್ಲಾಧಿಕಾರಿಗಳು, “ಗೋಡೆ ಎಷ್ಟು ಎತ್ತರವಿರಬೇಕು ಎಂಬುದು ನಿಮ್ಮ ಬಯಕೆ?” ಎಂದು ಕೇಳಿದರು.

“ಮೂರು ಮೀಟರ್”

“ಗೋಡೆ ಮೈದಾನವನ್ನು ಪೂರ್ತಿಯಾಗಿ ಸುತ್ತುವರಿಯಬೇಕೆ?”

“ಹೌದು, ಸಾರ್. 181 ಮೀಟರ್ ಗಳೂ ಸುತ್ತುವರಿಯಬೇಕು.”

“ಒಮ್ಮೆ ಯೋಚಿಸಿ ನೋಡಿ. ಸ್ವಲ್ಪ ಜಾಗ ತೆರವು ಬಿಡಬೇಕಾಗಬಹುದು...”

“ಇಲ್ಲ, ಸಾರ್. ನಾವು ಅದನ್ನಾಗಲೇ ಯೋಚಿಸಿಯಾಗಿದೆ.”

“ನೀವು 181 ಮೀಟರ್ ಗಳನ್ನೂ ಗೋಡೆಯಿಂದ, ಅದರಲ್ಲೂ ಮೂರು ಮೀಟರ್ ಎತ್ತರದ ಗೋಡೆಯಿಂದ, ಸುತ್ತುವರಿದರೆ ಮೈದಾನದ ಒಳಕ್ಕೆ ಹೋಗುವುದಾದರೂ ಹೇಗೆ?”

ಹಳ್ಳಿಗರು ತಮ್ಮಲ್ಲೇ ಗುಸು-ಗುಸು ಮಾತಾಡಿಕೊಳ್ಳಲು ತೊಡಗಿದರು, “ನಾವಿದನ್ನು ಯೋಚಿಸಲೇ ಇಲ್ಲ. ಈಗೇನು ಮಾಡುವುದು? ಸಾರ್ ಹೇಳುತ್ತಿರುವುದು ಸರಿಯಾಗಿಯೇ ಇದೆ. ಹೋಗಿ, ಬರಲು ಸ್ವಲ್ಪ ಜಾಗ ಬಿಡಬೇಕಾಗುತ್ತದೆ.”

ಈ ಗುಸುಗುಸು ಪಿಸುಮಾತಿನ ನಡುವೆ ಜಿಲ್ಲಾಧಿಕಾರಿಗಳು, “ನೀವು ಎಷ್ಟು ಜಾಗ ಮಾರ್ಗಕ್ಕಾಗಿ ಬಿಡಬೇಕು ಎಂಬುದನ್ನು ನಿರ್ಧರಿಸಿ ಹೇಳಿ. ಬೇಕಾದರೆ ಹೊರಗೆ ಹೋಗಿ, ಮಾತಾಡಿಕೊಂಡು ಬನ್ನಿ.”

ಅವರೆಲ್ಲರೂ ಹೊರಬಂದು, ವಿಷಯವನ್ನು ಚರ್ಚಿಸಿದರು. ಮಾರ್ಗಕ್ಕಾಗಿ ನಾಲ್ಕು ಮೀಟರ್ ಜಾಗ ಮುಕ್ತವಾಗಿ ಬಿಡಲು ನಿರ್ಧರಿಸಲಾಯಿತು. ಇದನ್ನವರು ಜಿಲ್ಲಾಧಿಕಾರಿಗಳಿಗೆ ತಿಳಿಸಿದರು. ಅವರು ಹಳ್ಳಿಗರ ನಿರ್ಧಾರವನ್ನು ಮೆಚ್ಚಿಕೊಂಡು, 177 ಮೀಟರ್ ಉದ್ದದ ಗೋಡೆಯನ್ನು ಕಟ್ಟಲು ಸಂತೋಷದಿಂದ ಹಣ ಮಂಜೂರು ಮಾಡಿದರು. ಹಳ್ಳಿಗರ ಸಂತಸಕ್ಕೆ ಪಾರವೇ ಇರಲಿಲ್ಲ. ಈ ಕಥೆ ಹೇಳುತ್ತಾ ನಾನು ಆಟದ ಮೈದಾನದ ಆಕಾರವನ್ನು ಹಸಿರು ಹಲಗೆಯ ಮೇಲೆ ಬಿಡಿಸುತ್ತಾ ಹೋದೆ, ಹಾಗೆಯೇ ಅಳತೆಗಳನ್ನು ಪಟ್ಟಿಮಾಡುತ್ತಾ ಇದ್ದೆ. ಮಕ್ಕಳು ಈ ಪ್ರಕ್ರಿಯೆಯನ್ನು ಗ್ರಹಿಸಿದ್ದಷ್ಟೇ ಅಲ್ಲದೆ, ಮನಸ್ಸಿನಲ್ಲಿಯೇ ಎಣಿಸಿ ಕೂಡುತ್ತಿದ್ದರು. ಮರುದಿನ ನಾನು ಈ ಪ್ರಕ್ರಿಯೆಯ ಬಗ್ಗೆ ಮಾತನಾಡಿ, ಅಭ್ಯಾಸಕ್ಕಾಗಿ ಕೆಲವು ಪ್ರಶ್ನೆಗಳನ್ನು ನೀಡಿದಾಗ ಅವರು ಲೆಕ್ಕಮಾಡಿ ಉತ್ತರಿಸುವುದರಲ್ಲಿ ಮಗ್ನರಾಗಿದ್ದರು.

**ಗಜೇಂದ್ರಕುಮಾರ್ ದೇವಾಂಗನ್:** ಇವರು ಕಳೆದ ಆರು ವರ್ಷಗಳಿಂದ ಛತ್ತೀಸಗಢದ ಧಮ್ತರಿಯ ಅಜೀಂ ಪ್ರೇಮ್ ಜಿ ಶಾಲೆಯಲ್ಲಿ ಬೋಧಕರಾಗಿದ್ದಾರೆ. ಇದಕ್ಕೂ ಮೊದಲು ತಮ್ಮ ವೃತ್ತಿ ಜೀವನವನ್ನು ಛತ್ತೀಸಗಢದಲ್ಲಿ ಪ್ರಾರಂಭಿಸಿದ ಇವರು ಅಲ್ಲಿನ ಸರ್ಕಾರಿ ಶಾಲೆಯಲ್ಲಿ ಹನ್ನೆರಡು ವರ್ಷಗಳ ಕಾಲ ಪ್ರಾಥಮಿಕ ಶಾಲಾ ಶಿಕ್ಷಕರಾಗಿ ಸೇವೆ ಸಲ್ಲಿಸಿದ್ದರು, ಮಕ್ಕಳಿಗಾಗಿ ಕಥೆ, ಕವನಗಳನ್ನು ಬರೆಯುವುದು, ಸಂಗೀತವನ್ನಾಲಿಸುವುದು, ಚಿತ್ರಕಲೆ ಇವರ ಹವ್ಯಾಸಗಳಲ್ಲಿ ಕೆಲವು. ಇವರ ಮಿಂಚಂಚೆ ವಿಳಾಸ: gajendra.dewangan@azimpremjifoundation.org